# ತುಮಕೂರು ವಿಶ್ವವಿದ್ಯಾನಿಲಯ

ಪರೀಕ್ಷಾ ಭವನ, ಬಿ.ಹೆಚ್.ರಸ್ತೆ, ತುಮಕೂರು-572 103 ☎:0816 - 2255650,2273511 ಫ್ಯಾಕ್ಸ್ :0816-2270719


ಸಂಖ್ಯೆ:ತುವಿ:ಪ.ವಿ. :2022-23:397 ದಿನಾಂಕ: 02.12.2022

## ಸುತ್ತೋಲೆ

ವಿಷಯ: ಕೋವಿಡ್-19 ರ ಕಾರಣದಿಂದಾಗಿ ಪರೀಕ್ಷೆ ಇಲ್ಲದೆ ಉನ್ನತೀಕರಣಗೊಳಿಸುವ ಸೌಲಭ್ಯದ ಕುರಿತು.
ಉಲ್ಲೇಖ: ಪರಿಷ್ಕೃತ ಅಧಿಸೂಚನೆ ಸಂಖ್ಯೆ: ತು.ವಿ:ಪ.ವಿ:2022-23/365 ದಿನಾಂಕ:16.08.2022

* * * * * * *

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಸೆಪ್ಟೆಂಬರ್-2020 ಮತ್ತು ಸೆಪ್ಟೆಂಬರ್/ಅಕ್ಟೋಬರ್-2021 ರ ಮಾಹೆಗಳಲ್ಲಿನ II & IV ನೇ ಸೆಮಿಸ್ಟರ್‌ಗಳಲ್ಲಿ ವ್ಯಾಸಂಗ ಮಾಡಿದ ವಿದ್ಯಾರ್ಥಿಗಳಿಗೆ ಯು.ಜಿ.ಸಿ. ಹಾಗೂ ರಾಜ್ಯ ಸರ್ಕಾರದ ಕೋವಿಡ್-19 ಮಾರ್ಗಸೂಚಿಯನುಸಾರ ವಿಶ್ವವಿದ್ಯಾನಿಲಯದ ಎಲ್ಲಾ ವಿವಿಧ ಸ್ನಾತಕ/ಸ್ನಾತಕ ಶಿಕ್ಷಣ ಪದವಿಗಳ ಎರಡು ಮತ್ತು ನಾಲ್ಕನೇ ಸೆಮಿಸ್ಟರ್ ಪರೀಕ್ಷೆಗಳಿಗೆ ಸಂಬಂಧಿಸಿದಂತೆ ***ಪರೀಕ್ಷಾ ಶುಲ್ಕವನ್ನು ಪಾವತಿಸಿದಂತಹ ಅರ್ಹ ವಿದ್ಯಾರ್ಥಿಗಳ*** ಪರೀಕ್ಷಾ ಫಲಿತಾಂಶಗಳನ್ನು ಕ್ರಮವಾಗಿ ಅವರ ಪ್ರಥಮ ಹಾಗೂ ತೃತೀಯ ಸೆಮಿಸ್ಟರ್ ಪರೀಕ್ಷಾ ಫಲಿತಾಂಶಗಳ ಆಧಾರದ ಮೇಲೆ ತೇರ್ಗಡೆಗೊಳಿಸಲಾಗಿದೆ. ಅಂದರೆ ವಿದ್ಯಾರ್ಥಿ ಪ್ರಥಮ ಸೆಮಿಸ್ಟರ್‌ನಲ್ಲಿ ಉತ್ತೀರ್ಣನಾಗಿದ್ದರೆ ಎರಡನೇ ಸೆಮಿಸ್ಟರ್ ಕೂಡ ನಿಯಮಾನುಸಾರ ಅಂಕಗಳ ಲೆಕ್ಕಚಾರ ಮಾಡಿ ಉತ್ತೀರ್ಣಗೊಳಿಸಲಾಗಿದೆ. ಇದೇ ಮಾದರಿಯಲ್ಲಿ ಮೂರನೇ ಸೆಮಿಸ್ಟರ್‌ನಿಂದ ನಾಲ್ಕನೇ ಸೆಮಿಸ್ಟರ್‌ಗೂ ಅನ್ವಯಿಸಲಾಗಿದೆ.

ಪ್ರಥಮ ಮತ್ತು ತೃತೀಯ ಸೆಮಿಸ್ಟರ್‌ನಲ್ಲಿ ಅನುತ್ತೀರ್ಣರಾದ ವಿದ್ಯಾರ್ಥಿಗಳ ಎರಡನೇ ಮತ್ತು ನಾಲ್ಕನೇ ಸೆಮಿಸ್ಟರ್‌ಗಳ ಫಲಿತಾಂಶಗಳನ್ನು ಪ್ರಕಟಿಸದೆ ವಿದ್ಯಾರ್ಥಿಯು ಪ್ರಥಮ ಮತ್ತು ತೃತೀಯ ಸೆಮಿಸ್ಟರ್‌ಗಳಲ್ಲಿ ಉತ್ತೀರ್ಣರಾಗುತ್ತಾರೋ ಆಗ ಸದರಿ ವಿದ್ಯಾರ್ಥಿಯು ಎರಡನೇ ಹಾಗೂ ನಾಲ್ಕನೇ ಸೆಮಿಸ್ಟರ್‌ಗಳಲ್ಲಿ ಉತ್ತೀರ್ಣ ಎಂದು ನಿಯಮಾನುಸಾರ ಅಂಕ ನಿಗಧಿಪಡಿಸಿ ಫಲಿತಾಂಶ ಪ್ರಕಟಿಸಲಾಗಿದೆ. ಈ ಮೇಲಿನ ಪ್ರಕ್ರಿಯೆಗಳಂತೆ ಈಗಾಗಲೇ ಎರಡು ಬಾರಿ (ಸೆಪ್ಟೆಂಬರ್-2020 ಮತ್ತು ಸೆಪ್ಟೆಂಬರ್/ಅಕ್ಟೋಬರ್-2021 ರ ಮಾಹೆಗಳಲ್ಲಿ) ಕ್ರಮವಹಿಸಲಾಗಿದೆ. ಸ್ನಾತಕೋತ್ತರ ಪದವಿಗಳ ದ್ವಿತೀಯ ಸೆಮಿಸ್ಟರ್ ಪರೀಕ್ಷೆಗಳಿಗೂ ಈ ಮೇಲಿನಂತೆ ಕ್ರಮವಹಿಸಲಾಗಿದೆ.

**ಅದರಂತೆ ಕೋವಿಡ್-19 ರ ಕಾರಣದಿಂದಾಗಿ ತೇರ್ಗಡೆಗೊಳಿಸಲು ಅನ್ವಯಿಸುವ ಶೈಕ್ಷಣಿಕ ಸಾಲು ಮತ್ತು ಸೆಮಿಸ್ಟರಿನ ವಿವರ ಈ ಕೆಳಕಂಡಂತಿರುತ್ತದೆ.**

ಸ್ನಾತಕ ಪದವಿ:-

| ಕ್ರ. ಸಂ | ವಿದ್ಯಾರ್ಥಿ ಪ್ರಥಮ ವರ್ಷಕ್ಕೆ ಪ್ರವೇಶಾತಿ ಪಡೆದ ಶೈಕ್ಷಣಿಕ ಸಾಲು(UG) | ತೇರ್ಗಡೆಗೆ ಅರ್ಹರಾದ ಸೆಮಿಸ್ಟರಿನ ವಿವರ | ಯಾವ ಶೈಕ್ಷಣಿಕ ಸಾಲಿನವರೆಗೂ ಅವಕಾಶ ಕಲ್ಪಿಸಲಾಗಿದೆ | ಉನ್ನತೀಕರಣ ಸೌಲಭ್ಯವನ್ನು ಪಡೆಯಲು ಇರುವ ಸಮಯಾವಕಾಶ | ಷರಾ |
|---|---|---|---|---|---|
| 1. | 2018-19 | 4 ನೇ ಸೆಮಿಸ್ಟರ್ | 2022-23 ನೇ ಶೈಕ್ಷಣಿಕ ಸಾಲು | ಒಂದು ಬಾರಿ ಮಾತ್ರ ಅವಕಾಶವಿರುತ್ತದೆ. | ಸದರಿ ಶೈಕ್ಷಣಿಕ ಸಾಲಿನೊಳಗೆ ಹಿಂದಿನ ಸೆಮಿಸ್ಟರ್‌ಗಳ ಪರೀಕ್ಷೆ ಉತ್ತೀರ್ಣಗೊಂಡರೆ ಮಾತ್ರ ಮುಂದಿನ ಸೆಮಿಸ್ಟರ್ ಪರೀಕ್ಷೆಯ ಫಲಿತಾಂಶವನ್ನು ಉನ್ನತೀಕರಿಸಲಾಗುವುದು |
| 2. | 2019-20 | 2 & 4 ನೇ ಸೆಮಿಸ್ಟರ್ | 2022-23 ನೇ ಶೈಕ್ಷಣಿಕ ಸಾಲು | ಒಂದು ಬಾರಿ ಮಾತ್ರ ಅವಕಾಶವಿರುತ್ತದೆ. | |
| 3. | 2020-21 | 2 ನೇ ಸೆಮಿಸ್ಟರ್ | 2023-24 ನೇ ಶೈಕ್ಷಣಿಕ ಸಾಲು | ಎರಡು ಬಾರಿ ಅವಕಾಶವಿರುತ್ತದೆ. | |

ಸ್ನಾತಕ ಶಿಕ್ಷಣ:-

| ಕ್ರ. ಸಂ | ವಿದ್ಯಾರ್ಥಿ ಪ್ರಥಮ ವರ್ಷಕ್ಕೆ ಪ್ರವೇಶಾತಿ ಪಡೆದ ಶೈಕ್ಷಣಿಕ ಸಾಲು(B.Ed) | ತೇರ್ಗಡೆಗೆ ಅರ್ಹರಾದ ಸೆಮಿಸ್ಟರಿನ ವಿವರ | ಯಾವ ಶೈಕ್ಷಣಿಕ ಸಾಲಿನವರೆಗೂ ಅವಕಾಶ ಕಲ್ಪಿಸಲಾಗಿದೆ | ಉನ್ನತೀಕರಣ ಸೌಲಭ್ಯವನ್ನು ಪಡೆಯಲು ಇರುವ ಸಮಯಾವಕಾಶ | ಷರಾ |
|---|---|---|---|---|---|
| 1. | 2019-20 | 2 ನೇ ಸೆಮಿಸ್ಟರ್ | 2021-22 ನೇ ಶೈಕ್ಷಣಿಕ ಸಾಲು | ಉನ್ನತೀಕರಣ ಸೌಲಭ್ಯವನ್ನು ಪಡೆಯಲು ಕಾಲಾವಕಾಶ ಮುಕ್ತಾಯಗೊಂಡಿರುತ್ತದೆ. | - |
| 2. | 2020-21 | 2 ನೇ ಸೆಮಿಸ್ಟರ್ | 2022-23 ನೇ ಶೈಕ್ಷಣಿಕ ಸಾಲು | ಒಂದು ಬಾರಿ ಮಾತ್ರ ಅವಕಾಶವಿರುತ್ತದೆ. | ಸದರಿ ಶೈಕ್ಷಣಿಕ ಸಾಲಿನೊಳಗೆ ಹಿಂದಿನ ಸೆಮಿಸ್ಟರ್‌ಗಳ ಪರೀಕ್ಷೆ ಉತ್ತೀರ್ಣಗೊಂಡರೆ ಮಾತ್ರ ಮುಂದಿನ ಸೆಮಿಸ್ಟರ್ ಪರೀಕ್ಷೆಯ ಫಲಿತಾಂಶವನ್ನು ಉನ್ನತೀಕರಿಸಲಾಗುವುದು |

(.....2ನೇ ಪುಟಕ್ಕೆ)

ಮೇಲ್ಕಂಡ ಕೋಷ್ಟಕದಲ್ಲಿ ವಿವರಿಸಿರುವಂತೆ ಅವಕಾಶ ಕಲ್ಪಿಸಲಾಗಿರುವ ಶೈಕ್ಷಣಿಕ ಸಾಲಿನೊಳಗೆ ವಿದ್ಯಾರ್ಥಿಯು ಸಂಬಂಧಪಟ್ಟ ಪರೀಕ್ಷೆಗಳನ್ನು ಉತ್ತೀರ್ಣರಾದಲ್ಲಿ ಮಾತ್ರ ಫಲಿತಾಂಶವನ್ನು ಉನ್ನತೀಕರಿಸಬಹುದಾಗಿರುತ್ತದೆ, ಉತ್ತೀರ್ಣರಾಗದಿದಲ್ಲಿ ಸದರಿ ವಿದ್ಯಾರ್ಥಿಯನ್ನು ಪೂರಕ ವಿದ್ಯಾರ್ಥಿಯೆಂದು(Repeater Student) ಪರಿಗಣಿಸಲಾಗುವುದು. ನಂತರ ಆ ವಿದ್ಯಾರ್ಥಿಯು ಪೂರಕ ಪರೀಕ್ಷಾ ಶುಲ್ಕವನ್ನು ಪಾವತಿಸಿ ಪರೀಕ್ಷೆಯನ್ನು ಬರೆದು ನಂತರ ತೇರ್ಗಡೆಹೊಂದಬೇಕಾಗಿರುತ್ತದೆ.

ಪ್ರಾಂಶುಪಾಲರುಗಳು ಮೊದಲನೇ & ಮೂರನೇ ಸೆಮಿಸ್ಟರ್‌ಗಳ ಪರೀಕ್ಷಾ ಶುಲ್ಕವನ್ನು ಪಾವತಿಸಿಕೊಳ್ಳುವ ಸಂದರ್ಭದಲ್ಲಿ ಸದರಿ ವಿಷಯವನ್ನು ಕಡ್ಡಾಯವಾಗಿ ವಿದ್ಯಾರ್ಥಿಗಳ ಗಮನಕ್ಕೆ ತಂದು ಪಾವತಿಕೊಳ್ಳುವುದು.

ಸದರಿ ವಿಷಯವನ್ನು ತಮ್ಮ ಕಾಲೇಜಿನ ಎಲ್ಲಾ ವಿದ್ಯಾರ್ಥಿಗಳ ಗಮನಕ್ಕೆ ತರುವುದು ಹಾಗೂ ಪರೀಕ್ಷಾ ಶುಲ್ಕವನ್ನು ಪಾವತಿಕೊಳ್ಳುವಾಗ ಈ ಅಂಶಗಳಂತೆ ಪಾವತಿಸಿಕೊಳ್ಳುವುದು.

ಕುಲಸಚಿವರು(ಪರೀಕ್ಷಾಂಗ)

ಗೆ,

1. ಪ್ರಾಂಶುಪಾಲರುಗಳು, ಘಟಕ ಕಾಲೇಜುಗಳು / ಸಂಯೋಜಿತ ಸ್ನಾತಕ ಪದವಿ ಕಾಲೇಜುಗಳು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.
2. ಪ್ರಾಂಶುಪಾಲರುಗಳು, ಸಂಯೋಜಿತ ಎಲ್ಲಾ ಸ್ನಾತಕ ಶಿಕ್ಷಣ ಪದವಿ ಕಾಲೇಜುಗಳು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.

ಪ್ರತಿಗಳು:

1. ಮಾನ್ಯ ಕುಲಪತಿಯವರ ಆಪ್ತ ಕಾರ್ಯದರ್ಶಿಗಳು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.
2. ಮಾನ್ಯ ಕುಲಸಚಿವರ ಆಪ್ತ ಸಹಾಯಕರು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.
3. ಕಛೇರಿ ಪ್ರತಿ.